**ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐಎಫ್ಎ)**

**ಯೋಜನೆ 560 ಅಡಿಯಲ್ಲಿ**

**ಕಲಾ ಯೋಜನೆಗಳಿಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತದೆ**

**(ಸಂಶೋಧನೆ/ಅಭ್ಯಾಸ)**

**ಕೊನೆಯ ದಿನಾಂಕ : ಸೋಮವಾರ, ಮೇ 23, 2022**

ಬೆಂಗಳೂರನ್ನು ಒಂದು ವೇದಿಕೆಯಾಗಿ, ಕ್ಯಾನ್ವಾಸ್ ಆಗಿ, ನೋಟ್ ಬುಕ್ ಆಗಿ ಅಥವಾ ಡಿಜಿಟಲ್ ಅಂಗಳವನ್ನಾಗಿ ಪರಿವರ್ತಿಸಿ! ಅದರ ವಿವಿಧ ಧ್ವನಿಗಳು, ಸ್ಥಳಗಳು, ಇತಿಹಾಸಗಳು, ನೆನಪುಗಳು, ಆಕಾಂಕ್ಷೆಗಳು ಮತ್ತು ಅಭಿವ್ಯಕ್ತಿಗಳನ್ನು ಸ್ಪರ್ಶಿಸಿ. ನಗರ ಎಂದರೆ ಯಾರು? ಬೆಂಗಳೂರಿಗನಾಗುವುದು ಎಂಬುದರ ಅರ್ಥವೇನು? ನಗರದ ನಿಜವಾದ ಸಾಮರ್ಥ್ಯಗಳು ಮತ್ತು ಸವಾಲುಗಳು ಎಲ್ಲಿವೆ? ಸಾಂಕ್ರಾಮಿಕ ಸಂದರ್ಭದಲ್ಲಿ ನಗರವು ಹೇಗೆ ಬದಲಾಗಿದೆ? ಬೆಂಗಳೂರು ನಿಮ್ಮ ಮನಸ್ಸಿನಲ್ಲಿದ್ದರೆ, ಈ ಕರೆ ನಿಮಗಾಗಿ.

ಐಎಫ್ಎ ಬೆಂಗಳೂರಿನಲ್ಲಿ ನಗರದ ಭೂತ, ವರ್ತಮಾನ ಹಾಗೂ ಭವಿಷ್ಯದ ಜೊತೆ ವಿಮರ್ಶಾತ್ಮಕವಾಗಿ ಅನುಸಂಧಾನಿಸುವ ಕಲಾ ಯೋಜನೆಗಳನ್ನು (ಸಂಶೋಧನೆ/ಅಭ್ಯಾಸ) ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತದೆ, ಕಲಾವಿದರನ್ನು ಮತ್ತು ವಿದ್ವಾಂಸರನ್ನು ಒಟ್ಟುಗೂಡಿಸುವ ಸಹಯೋಗದ ಯೋಜನೆಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಯೋಜನೆಗಳ ಫಲಿತಾಂಶಗಳು ಪ್ರದರ್ಶನಗಳು, ವಸ್ತು ಪ್ರದರ್ಶನಗಳು, ಇನ್‌ಸ್ಟಲೇಷನ್‌ಗಳು, ಚಲನಚಿತ್ರಗಳು, ಸಂಶೋಧನಾ ಪ್ರಬಂಧಗಳು/ಮೊನೊಗ್ರಾಫ್‌ಗಳು ಅಥವಾ ಅಂತರ್‌ಶಿಸ್ತೀಯ ಕೆಲಸಗಳನ್ನು ಒಳಗೊಂಡಿರಬಹುದು. ಈ ಫಲಿತಾಂಶಗಳ ಪ್ರಸ್ತುತಿಯು ಸಾರ್ವಜನಿಕವಾಗಿರಬೇಕು ಮತ್ತು ಭೌತಿಕ ಸ್ವರೂಪದಲ್ಲಿರಬೇಕು, ಅಗತ್ಯವಿದ್ದಲ್ಲಿ ಮಾತ್ರ ವರ್ಚುಯಲ್ ಅಂಶಗಳನ್ನು ಒಳಗೊಳ್ಳಬೇಕು. **(ಪೂರ್ಣ ಪ್ರಮಾಣದ ವರ್ಚುವಲ್ ಪ್ರಸ್ತುತಿಗಳನ್ನು ನಾವು ಪ್ರೋತ್ಸಾಹಿಸುವುದಿಲ್ಲ.)**

**ಯೋಜನೆಯ ಅವಧಿ:** 12 ತಿಂಗಳವರೆಗೆ

**ಬಜೆಟ್:** ಗರಿಷ್ಟ 4 ಲಕ್ಷ ರೂ

**ಕೊನೆಯ ದಿನಾಂಕ : ಮೇ 23, 2022**

**ಯಾರು ಅರ್ಜಿ ಸಲ್ಲಿಸಬಹುದು?**

ಕಲಾಭ್ಯಾಸಿಗಳು ಮತ್ತು ಸಂಶೋಧಕರು/ವಿದ್ವಾಂಸರು ಅರ್ಜಿ ಸಲ್ಲಿಸಬಹುದು. ಕಲಾಭ್ಯಾಸಿಗಳಾಗಿ, ನೀವು ಬರಹಗಾರರು, ಪ್ರದರ್ಶನ ಕಲಾವಿದರು, ದೃಶ್ಯ ಕಲಾವಿದರು, ಚಲನಚಿತ್ರ ನಿರ್ಮಾಪಕರು, ಹೊಸ ಮಾಧ್ಯಮಗಳು ಮತ್ತು ಡಿಜಿಟಲ್ ಕಲಾವಿದರು ಅಥವಾ ಅಂತರ್ ಶಿಸ್ತಿನ ಕೆಲಸದಲ್ಲಿ ತೊಡಗಿರುವ ಕಲಾಭ್ಯಾಸಿಗಳು ಆಗಿರಬಹುದು. ಅರ್ಜಿದಾರರು ಬೆಂಗಳೂರಿನ ನಿವಾಸಿಗಳಾಗಿರಬೇಕು ಮತ್ತು ಯೋಜನೆಯನ್ನು ಬೆಂಗಳೂರಿನಲ್ಲಿಯೇ ಹಮ್ಮಿಕೊಳ್ಳಬೇಕು.

**ಅರ್ಹತೆ:**

ನೀವು ಭಾರತೀಯ ಪ್ರಜೆಯಾಗಿದ್ದರೆ ಮಾತ್ರ ನೀವು ಅರ್ಜಿ ಸಲ್ಲಿಸಲು ಅರ್ಹರು. ನಿಮ್ಮ ಸಹಯೋಗಿಗಳು ಕೂಡ ಭಾರತೀಯ ಪ್ರಜೆಗಳಾಗಿರಬೇಕು. ವಿವರಗಳಿಗಾಗಿ ದಯವಿಟ್ಟು ಇಲ್ಲಿ ಕ್ಲಿಕ್ ಮಾಡಿ.

**ಯೋಜನೆಯ ಪ್ರಸ್ತಾವನೆಗಳನ್ನು ಹೇಗೆ ಕಳುಹಿಸುವುದು?**

ಈ ಕೆಳಗಿನ ವಿವರಗಳೊಂದಿಗೆ ನಮಗೆ ಪ್ರಸ್ತಾವನೆಯನ್ನು ಕಳುಹಿಸಿ:

- ನೀವು ಪ್ರಸ್ತುತ ನಡೆಸುತ್ತಿರುವ ಕಲಾ ಅಭ್ಯಾಸದ ಸಂಶೋಧನೆ ಮತ್ತು ಬೆಂಗಳೂರಿನ ಕುರಿತಾದ ನಿಮ್ಮ ವಿಮರ್ಶಾತ್ಮಕ ಕಲಾತ್ಮಕ ಅಥವಾ ಸಂಶೋಧನಾತ್ಮಕ ಕಾಳಜಿಗಳು

- ಯೋಜನೆಯ ವಿವರಗಳು
- ಸಹಯೋಗಿಗಳು (ಯಾವುದಾದರೂ ಇದ್ದರೆ) ಮತ್ತು ಈ ಸಹಯೋಗಗಳ ಸ್ವರೂಪ
- ಕಾಲಾನುಸಾರ ವಿವರಗಳು ಮತ್ತು ಬಜೆಟ್

ಪ್ರಸ್ತಾವನೆಗಳೊಂದಿಗೆ ಇವುಗಳನ್ನು ಸೇರಿಸಿ

- ನಿಮ್ಮ ಹಿಂದಿನ ಕೆಲಸದ ಬರವಣಿಗೆಗಳು, ಛಾಯಾಚಿತ್ರಗಳು, ಆಡಿಯೋ/ವಿಡಿಯೋ ರೆಕಾರ್ಡಿಂಗ್‌ಗಳಂತಹ ಪೋಷಕ ಸಾಮಗ್ರಿಗಳು
- ನಿಮ್ಮ ಅಂಚೆ ವಿಳಾಸ, ದೂರವಾಣಿ ಸಂಖ್ಯೆಗಳು ಮತ್ತು ಇ–ಮೇಲ್ ವಿಳಾಸ ಸೇರಿದಂತೆ ಇತ್ತೀಚಿನ ಬಯೋಡೇಟಾ

ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ನಿಮ್ಮ ಪ್ರಸ್ತಾಪವನ್ನು ಬರೆಯಲು ನೀವು ಆಯ್ಕೆ ಮಾಡಬಹುದು.

ನಿಮ್ಮ ಪ್ರಸ್ತಾವನೆಗಳನ್ನು ನಮಗೆ ಕಳುಹಿಸುವ ಮೊದಲು ನೀವು ಯೋಜನಾ ವಿಚಾರಗಳನ್ನು ನಮ್ಮೊಂದಿಗೆ ಚರ್ಚಿಸಲು ಬಯಸಿದರೆ ನೀವು ನಮಗೆ ಕರೆ ಮಾಡಬಹುದು ಅಥವಾ ನಮಗೆ ಬರೆಯಬಹುದು. ನಿಮ್ಮ ಅಂತಿಮ ಪ್ರಸ್ತಾವನೆಯನ್ನು, ಎಲ್ಲಾ ಮಾಹಿತಿಗಳೊಂದಿಗೆ, 25 ಎಂ.ಬಿ. ಮೀರದ ಒಂದೇ ಇಮೇಲ್‌ನಲ್ಲಿ sumana@indiaifa.org ಗೆ **ಮೇ 23, 2022** ರ ಒಳಗೆ ಸಲ್ಲಿಸಬೇಕು.

**ಅಪೂರ್ಣ ಪ್ರಸ್ತಾವನೆಗಳು ಮತ್ತು ಅರ್ಹತಾ ಮಾನದಂಡಗಳ ವ್ಯಾಪ್ತಿಗೆ ಬರದಿರುವ ಅರ್ಜಿದಾರರನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಿ.**

**ಆಯ್ಕೆ ಪ್ರಕ್ರಿಯೆ**

ಆಯ್ದ ಪ್ರಸ್ತಾವನೆಗಳನ್ನು ಬಾಹ್ಯ ಆಯ್ಕೆ ಸಮಿತಿಯಿಂದ ಮೌಲ್ಯಮಾಪನ ಮಾಡಲಾಗುತ್ತದೆ. ಈ ಆಯ್ದ ಅರ್ಜಿದಾರರು ಮೌಲ್ಯಮಾಪನದ ಸಮಯದಲ್ಲಿ ಆಯ್ಕೆ ಸಮಿತಿಯೊಂದಿಗೆ ಚರ್ಚೆಗೆ ಲಭ್ಯವಿರಬೇಕು. ಅಂತಿಮವಾಗಿ ಆಯ್ಕೆಯಾದ ಯೋಜನೆಗಳನ್ನು ಜೂಲೈ 2022 ರಲ್ಲಿ ಘೋಷಿಸಲಾಗುವುದು. ಯೋಜನೆಗಳ ಕುರಿತು ಐಎಫ್‌ಎ ನಿರ್ಧಾರವೇ ಅಂತಿಮವಾಗಿರುತ್ತದೆ.

ನಿಮ್ಮ ಪ್ರಸ್ತಾವನೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು / ಸ್ಪಷ್ಟೀಕರಣಗಳಿಗಾಗಿ, ನೀವು ಸುಮನಾ ಚಂದ್ರಶೇಖರ್, ಕಾರ್ಯಕ್ರಮದ ಮುಖ್ಯಸ್ಥರನ್ನು sumana@indiaifa.org ನಲ್ಲಿ ಸಂಪರ್ಕಿಸಬಹುದು.

ಆಯ್ಕೆಯಾದ ಎಲ್ಲ ಯೋಜನೆಗಳನ್ನು ಐಎಫ್‌ಎ ಕಾರ್ಯಗತಗೊಳಿಸುತ್ತದೆ.

**ಪ್ರಾಜೆಕ್ಟ್ 560 ಕುರಿತು**

ಯೋಜನೆ 560 ಇದು ಐಎಫ್‌ಎ ಸಂಸ್ಥೆಯು ಬೆಂಗಳೂರಿಗೆ ವಿಶೇಷವಾಗಿ ಹಮ್ಮಿಕೊಂಡದ್ದಾಗಿದೆ. ಬೆಂಗಳೂರಿನ ಪಿನ್‌ಕೋಡ್‌ನ ಮೊದಲ ಮೂರು ಸಂಖ್ಯೆಗಳನ್ನು ಬಳಸಿಕೊಂಡು ಈ ಯೋಜನೆಯನ್ನು ಹೆಸರಿಸಲಾಗಿದೆ. ಯೋಜನೆ 560 ಕಲಾವಿದರು, ಮೇಧಾವಿಗಳು, ಸಂಘ–ಸಂಸ್ಥೆಗಳು ನೆರೆಹೊರೆಯವರೊಂದಿಗೆ ಕ್ರಿಯಾತ್ಮಕವಾಗಿ ಒಡನಾಡುವಂತೆ ಬಯಸುತ್ತದೆ. ಇದರ ಗುರಿ ಜನರಿಗೆ ನಗರದ ವಿಭಿನ್ನ ಅನುಭವಗಳನ್ನು ವಿವಿಧ ಆಯಾಮಗಳಲ್ಲಿ ಅನ್ವೇಷಿಸುವಂತೆ ಮಾಡುವುದಾಗಿದೆ. ನಗರ ಜೀವನವನ್ನು ಸಂಬಂಧಗಳೊಂದಿಗೆ ಹೊಸ ಬಗೆಗಳಲ್ಲಿ ಉತ್ಸಾಹದಿಂದ ಕಲ್ಪಿಸಿಕೊಳ್ಳಲು ಸಾಧ್ಯ ಮಾಡುವುದಾಗಿದೆ.

**ನಮ್ಮ 560. ನಮ್ಮ ಯೋಜನೆ. ನಮ್ಮ ಪಿನ್‌ಕೋಡ್**

**ಪ್ರಾಜೆಕ್ಟ್ 560 ಪ್ರೋಗ್ರಾಂ ಅನ್ನು ಸೋನಿ ಪಿಕ್ಚರ್ಸ್ ಎಂಟರ್ಟೈನ್ಮೆಂಟ್ ಫಂಡ್** ಹಾಗು ಬಿ ಎನ್ ಪಿ ಪಾರಿಬಾ ಇಂಡಿಯಾ **ಫೌಂಡೇಶನ್ ಬೆಂಬಲಿಸುತ್ತದೆ.**